15 ಜನ ಶಾಸಕರುಗಳಿಗೆ ಅಲಾಟ್ ಮಾಡಿದ್ದೀರಿ. 2013–14ನೇ ಸಾಲಿನಲ್ಲಿ ಮತ್ತೆ ಹೆಚ್ಚುವರಿಯಾಗಿ 86 ಜನ ಶಾಸಕರಿಗೆ 42,800 ಮನೆಗಳನ್ನು ಹೆಚ್ಚುವರಿಯಾಗಿ ಅಲಾಟ್ ಮಾಡಿದ್ದಾರೆ. ಇವೆಲ್ಲವೂ ಪೂರ್ತಿ ಕಾಂಗ್ರೆಸ್ ಶಾಸಕರು ಇರುವಂತಹ ಕ್ಷೇತ್ರಗಳಾಗಿವೆ. ಅಂದರೆ ಇಡೀ ರಾಜ್ಯದಲ್ಲಿ ಬೇರೆ ಕ್ಷೇತ್ರಗಳು ಇಲ್ಲವೆಂದು ತಿಳಿದುಕೊಂಡಿದ್ದಾರೋ ಆಥವಾ ಅಲ್ಲಿ ಬಡಜನರು ಇಲ್ಲವೆಂದು ತಿಳಿದುಕೊಂಡಿದ್ದಾರೋ? ಈ ರೀತಿಯಾಗಿ ಹೆಚ್ಚುವರಿ ಮನೆಗಳನ್ನು ಕೇವಲ ಭಾರತೀಯ ಜನತಾಪಕ್ಷದ ಶಾಸಕರ ಕ್ಷೇತ್ರಗಳಿಗಿಲ್ಲ, ಮತ್ತು ಜೆಡಿ(ಎಸ್) ಪಕ್ಷದ ಶಾಸಕರ ಕ್ಷೇತ್ರಗಳಿಗಿಲ್ಲ. ಏತಕ್ಕಾಗಿ ತಾವು ತಾರತಮ್ಯವನ್ನು ಮಾಡುತ್ತಿದ್ದೀರೆಂದು ನನಗೆ ಅರ್ಥವಾಗುತ್ತಿಲ್ಲ. ತಾರತಮ್ಯವಾಗಿರುವುದನ್ನು ತಾವು ಸರಿಪಡಿಸಬೇಕು. ಈ ರೀತಿ ಇರುವುದನ್ನು ನೀವು ಕ್ಯಾನ್ಸಲ್ ಮಾಡಿ ಎಲ್ಲಾ ಕ್ಷೇತ್ರಕ್ಕೂ ಅಲಾಟ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಗೋವಿಂದ ಎಂ ಕಾರಜೋಳ :ಈ ಸರ್ಕಾರವು ಕೇವಲ ಕಾಂಗ್ರೆಸ್ ಶಾಸಕರುಗಳು ಗೆದ್ದಿರುವ ಕಡೆ ಇರುವಂತಹ ಸರ್ಕಾರವೇ ?

(ಗೊಂದಲ)

ಶ್ರೀ ಕೆ.ಗೋಪಾಲ ಪೂಜಾರಿ : ಮನೆಗಳನ್ನು ಕೊಡುವಂತಹ ವಿಚಾರದಲ್ಲಿ ಈ ರೀತಿಯಾಗಿ ರಾಜಕೀಯ ಮಾಡುವುದು ಬೇಡ, ಸರಿಸಮಾನವಾಗಿ ಮಾಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

4. ವಸತಿ ಸಚಿವರ ಹೇಳಿಕೆ

ಶ್ರೀ ಎಂ.ಹೆಚ್. ಅಂಬರೀಶ್ (ಮಾನ್ಯ ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನಾನು ಕೊಡುವ ಮುಂಚೆಯೇ ವಿರೋಧ ಪಕ್ಷದ ಸದಸ್ಯರು ಈ ರೀತಿ ಕಿರುಚಾಡಿದರೆ ಹೇಗೆ? ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್

ಶೆಟ್ಟರ್‌ರವರು ನಮ್ಮ ರಾಜ್ಯವನ್ನು ಆಳಿದ್ದಾರೆ, ಅವರು ಪ್ರಶ್ನೆಯನ್ನು ಕೇಳಬೇಕಾದರೆ ಅದಕ್ಕೊಂದು ಅರ್ಥ ಇರುತ್ತದೆ. ನಿಮಗೂ ಸಹ ನಾನು ಮನೆಗಳನ್ನು ಕೊಟ್ಟಿದ್ದೇನೆಂದು ಗೊತ್ತಿದೆ. ಮನೆಗಳನ್ನು ಕೊಟ್ಟವನಿಗೆ ಈ ತರಹ Question ಬರುತ್ತದೆ ಎಂದು ನನಗೆ ಗೊತ್ತಿಲ್ಲವೇ? ನಾನು ತಿಳಿದುಕೊಂಡೇ ಇಲ್ಲಿಗೆ ಬಂದಿರುವುದು. ನಮ್ಮ ಹತ್ತಿರ ಎಲ್ಲಾ Statistics ಇವೆ. ನಿಮಗೆ 49,000 ಮನೆಗಳನ್ನು ಕೊಟ್ಟಾಗ ಆವತ್ತು ನೀವು ಕಿರುಚಲಿಲ್ಲ. ಇವತ್ತು ನೀವು ಸದನದಲ್ಲಿ ಕಿರುಚುತ್ತಿದ್ದೀರಿ. ನಿಮ್ಮ 142 ಕ್ಷೇತ್ರಕ್ಕೆ ಕೊಟ್ಟಿದ್ದೇನೆ. ಅದರಲ್ಲೂ ಮೊದಲು ಯಾರು ಕೊಟ್ಟಿದ್ದಾರೆ ಅವರಿಗೆ first served ಎಂದು ಒಬ್ಬೊಬ್ಬರಿಗಾಗಿ ನಾನು ಕೊಡುತ್ತಾ ಬಂದಿದ್ದೇನೆ. ನಾನು ಬಜೆಟ್ ಇಟ್ಟುಕೊಂಡು ಕೊಟ್ಟಿದ್ದೇನೆ. ನಾವು 3,17,000 ಮನೆಗಳನ್ನು ಕಟ್ಟಿದ್ದೇವೆ. ಇದು ನಾನು ಕೊಟ್ಟಿರುವಂತಹ ಮನೆಯಲ್ಲ ಅವರು ಕೊಟ್ಟಿರುವಂತಹ ಮನೆಗಳು. 3,17,000 ಮನೆಗಳನ್ನು ಕಟ್ಟಿದ್ದೇವೆ, ನಾವು ಕೊಟ್ಟಿರುವ 2,000 ಮನೆಗಳನ್ನು ಸಹ ಕಟ್ಟಿಲ್ಲ. ನಮಗೂ ಸರ್ಕಾರ ಇದೆ, ನಮಗೂ ವೋಟ್ ಅನ್ನು ಕೊಟ್ಟಿರುತ್ತಾರೆ. ನಮ್ಮ ಪಕ್ಷಕ್ಕೆ ವೋಟು ಕೊಟ್ಟಿರುವವರನ್ನು ನಾವು ಸಮಾಧಾನ ಮಾಡಬೇಕು ತಾನೇ ? ನಿಮಗೂ ಕೊಟ್ಟಿದ್ದರೂ ಈ ರೀತಿಯಾಗಿ ಏಕೆ ಕಿರುಚುತ್ತೀರಾ ? ಅದೇ ರೀತಿಯಾಗಿ ನಾನೂ ಸಹ ಕೊಟ್ಟಿದ್ದೇನೆ. ಅವರು ಕೊಟ್ಟಿರುವ ತರಹವೇ ನಾನು 3 ಲಕ್ಷ ಮನೆಗಳನ್ನು ಕೊಡುವಂತಹ ಗುರಿಯನ್ನಿಟ್ಟುಕೊಂಡಿದ್ದೇನೆ. ಆದರೂ ಸಹ ಸ್ಥಳೀಯ ಸಂಸ್ಥೆಗಳೆಲ್ಲವೂ ಇರುವುದು ಅವರ ಕೈಯಲ್ಲಿಯೇ ಅಂದರೆ ನಿಮ್ಮ ಕೈಯಲ್ಲಿಯೇ ಇದೆ, ಇದು ನಮ್ಮ ಕೈಯಲ್ಲಿ ಇಲ್ಲ. ನಾವು 7 ವರ್ಷಗಳ ಕಾಲ ಅಜ್ಞಾತವಾಸ ಅನುಭವಿಸಿದಾಗ ನಾವು ಇದೇ ರೀತಿಯಾಗಿ ಕಿರುಚುತ್ತಿದ್ದೆವು, ಆಗ ಏನೂ ಆಗಲಿಲ್ಲ. 6 ಲಕ್ಷ ಕೊಟ್ಟಿದ್ದಾರೆ, ನಮಗೆ 2 ಲಕ್ಷ ಕೊಟ್ಟಿದ್ದಾರೆ, ನಿಮಗೆ 40 ಸಾವಿರ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಪೂರ್ಣವಾಗಿ ಉತ್ತರವನ್ನು ಹೇಳಲು ಬಿಡಿ.

(ಗೊಂದಲ)